ಎಂದು ರಕ್ಷಿತ್ ಹೇಳುತ್ತಾರೆ.

## 'ವಿಶ್ವರೂಪಂ' ನೆನಪು

ಸಿನಿಮಾ ಬಿಡುಗಡೆ ಚಿತ್ರಮಂದಿರಗಳಲ್ಲಿ ಅಲ್ಲ, ಮನೆಯ ಜಗುಲಿಯಲ್ಲೇ ಎಂಬ ಮಾತು ಬಂದಾಗ ನೆನಪಿಸಿಕೊಳ್ಳಬೇಕಿರುವುದು 'ವಿಶ್ವರೂಪಂ' ವಿದ್ಯಮಾನ. ನಟ ಕಮಲ ಹಾಸನ್ ಅವರು ಈ ಸಿನಿಮಾವನ್ನು ಚಿತ್ರಮಂದಿರಗಳಿಗಿಂತ ಮೊದಲೇ ಡಿ2ಎಚ್ ವ್ಯವಸ್ಥೆಯ ಮೂಲಕ ಬಿಡುಗಡೆ ಮಾಡಿ, ಜನ ಮನೆಯಲ್ಲೇ ಸಿನಿಮಾ ನೋಡುವಂತೆ ಮಾಡಲು ಮುಂದಾಗಿದ್ದರು. ಇದಕ್ಕೆ ಚಿತ್ರಮಂದಿರಗಳಿಂದ ತೀವ್ರ ಪ್ರತಿರೋಧ ವ್ಯಕ್ತವಾಗಿತ್ತು.

'ಪ್ರತಿ ಮನೆಯಲ್ಲೂ ಅಡುಗೆ ಕೋಣೆ ಇರುತ್ತದೆ. ಹೀಗಿದ್ದರೂ ಜನ ಹೋಟೆಲ್‌ಗೆ ಹೋಗುತ್ತಾರೆ. ಪ್ರತಿ ಮನೆಯಲ್ಲೂ ದೇವರ ಕೋಣೆ ಇರುತ್ತದೆ. ಆದರೂ ಜನ ದೇವಸ್ಥಾನಕ್ಕೆ ಹೋಗುವುದನ್ನು ನಿಲ್ಲಿಸಿಲ್ಲ. ತಮಿಳುನಾಡಿನಲ್ಲಿ ಶೇಕಡ 3ರಷ್ಟು ಮನೆಗಳಲ್ಲಿ ಮಾತ್ರ ಡಿ2ಎಚ್ ಸೌಲಭ್ಯ ಇದೆ. ಅವರ ಪೈಕಿ ಅರ್ಧದಷ್ಟು ಜನ ಮಾತ್ರ ಮನೆಯಲ್ಲೇ ಕುಳಿತು ಸಿನಿಮಾ ವೀಕ್ಷಿಸಬಹುದು. ಹಾಗಾಗಿ, ಚಿತ್ರ ಪ್ರೇಮಿಗಳು ಚಿತ್ರಮಂದಿರಗಳಿಗೆ ಬಂದು ಸಿನಿಮಾ ನೋಡುವುದು ಖಚಿತ' ಎಂದು ಕಮಲ್ ಹೇಳಿದ್ದರು.

ಹೀಗಿದ್ದರೂ ಅವರು, ಪ್ರದರ್ಶಕ ವಲಯದ ವಿರೋಧದಿಂದಾಗಿ ಡಿ2ಎಚ್ ಮೂಲಕ ಸಿನಿಮಾ ಬಿಡುಗಡೆ ಯೋಜನೆಯನ್ನು ಕೈಬಿಡಬೇಕಾಯಿತು. ಆದರೆ, 'ಮೊದಲ ದಿನದ ಮೊದಲ ಶೋ' ಯೋಜನೆಯಿಂದ ಚಿತ್ರಮಂದಿರಗಳಿಗೆ ಹೋಗುವ ಜನರ ಸಂಖ್ಯೆ ಕಡಿಮೆ ಆಗಬಹುದೇ ಎಂಬ ಪ್ರಶ್ನೆಗೆ, ಕಮಲ ಹಾಸನ್ ಅವರ ಮಾತುಗಳ ಮೂಲಕ ಉತ್ತರ ಕಂಡುಕೊಳ್ಳಬಹುದೇ?!

## ಜಿಯೊ ಫೈಬರ್: ಪ್ರಯೋಜನ?!

ಕ್ರಿಕೆಟ್ ಪಂದ್ಯಗಳನ್ನು ವೀಕ್ಷಿಸುವವರ ಪೈಕಿ 'ಹಾಟ್‌ಸ್ಟಾರ್' ಒಟಿಟಿ (Over the top) ವೇದಿಕೆಯ ಬಗ್ಗೆ ತಿಳಿಯದವರು ಇರಲಿಕ್ಕಿಲ್ಲ. ಇದನ್ನೊಂದು 'ಡಿಜಿಟಲ್ ವೇದಿಕೆ' ಎನ್ನುವುದಕ್ಕಿಂತ ಆ್ಯಪ್ ಎಂದಾಗ ಹೆಚ್ಚಿನವರಿಗೆ ತಕ್ಷಣಕ್ಕೆ ಅರ್ಥವಾಗುತ್ತದೆ. ಕ್ರಿಕೆಟ್ ಪಂದ್ಯಗಳ ನೇರ ಪ್ರಸಾರದ ಮೂಲಕವೇ ಒಂದು ಬ್ರ್ಯಾಂಡ್ ಆಗಿ ಗಟ್ಟಿಯಾಗಿ ನೆಲೆಯೂರಿದ 'ಒಟಿಟಿ' ವೇದಿಕೆ ಇದು. ಇಂತಹ ಒಟಿಟಿ ವೇದಿಕೆಗಳು ಭಾರತದಲ್ಲಿ ಅಂದಾಜು 40 ಇವೆ. ಇವುಗಳಲ್ಲಿ ಇಂಗ್ಲಿಷ್–ಹಿಂದಿ ಸೇರಿದಂತೆ ಹಲವು ಭಾಷೆಗಳ ಮನರಂಜನಾ ಹೂರಣ ಇದೆ.

ನೆಟ್‌ಫ್ಲಿಕ್ಸ್, ಅಮೆಜಾನ್ ಪ್ರೈಮ್ ಮತ್ತು ಹಾಟ್‌ಸ್ಟಾರ್ ಭಾರತದ ಒಟಿಟಿ ಲೋಕದ ದೈತ್ಯರು. ಇವುಗಳು ಈಗ ಭಾರತದ ಪ್ರಾದೇಶಿಕ ಭಾಷೆಗಳಲ್ಲಿ ಮನರಂಜನಾ ಹೂರಣ ನೀಡುವತ್ತ ಹೆಚ್ಚಿನ ಗಮನ ಹರಿಸಿವೆ, ಈ ವೇದಿಕೆಗಳ ಮುಂದಿನ ಹಂತದ ಬೆಳವಣಿಗೆಗೆ ಭಾರತದ ಪ್ರಾದೇಶಿಕ ಭಾಷೆಗಳಲ್ಲಿನ ಹೂರಣವೇ ದೊಡ್ಡ ಸನ್ನೆಗೋಲು ಆಗಲಿದೆ ಎಂಬುದನ್ನು ವಿವರಿಸುವ ವರದಿಗಳು ಇಂಟರ್ನೆಟ್‌ನಲ್ಲಿ ಹತ್ತು ಹಲವು ಇವೆ.



ಹೇಮಂತ್ ರಾವ್



ರಕ್ಷಿತ್ ಶೆಟ್ಟಿ

